ದೇಖ್‌ಬಾಲ್ ಮಾಡುತ್ತಿದ್ದರು. ಮೈದಡವುವುದೇನು? ಮುದ್ದು ಮಾಡುವುದೇನು? ಹೊತ್ತುಹೊತ್ತಿಗೆ ಬೇಕಾಗುವಷ್ಟು ಆಹಾರ ಅವುಗಳಿಗೆ ತ್ರಾಸಿಲ್ಲದಂತೆ ಸಿಕ್ಕಿಬಿಡುತ್ತಿತ್ತು. ಆದರೆ, ಹಣ ಕೀರ್ತಿ ಪ್ರತಿಷ್ಠೆಗಳ ಹಿಂದೆ ಬಿದ್ದ ಮನುಷ್ಯ ಈ ಮೂಕ ಪ್ರಾಣಿಗಳು ಬಯಸುತ್ತಿದ್ದ ಪ್ರೀತಿಯನ್ನು ಕೊಡದೇ ಹೋದ. ಬರುಬರುತ್ತಾ ಹಿಡಿ ಅನ್ನ ಹಾಕಲಾರದಷ್ಟು ನಿಕೃಷ್ಟನಾದ. ಹೆತ್ತ ತಂದೆ ತಾಯಿ, ಅಣ್ಣ ತಮ್ಮಂದಿರನ್ನೇ ಕಂಡು ಕರುಬುವ ಮಾನವ ಈ ಪಾಪದ ಪ್ರಾಣಿಗಳ ಕಡೆ ಕಣ್ಣೆತ್ತಿ ಹೇಗೆ ನೋಡಿಯಾನು?... ಬಹುಶಃ ಶ್ವಾನ ಜೀವಿಗಳು ಬದಲಾಗುವುದಕ್ಕೆ ಇದುವೇ ಕಾರಣವಿರಬೇಕು. ಈ ಮನುಷ್ಯ ಜಾತಿಗೆ ಸಡ್ಡು ಹೊಡೆದು ಬದುಕಬೇಕೆಂದು ಅವೂ ಪಣ ತೊಟ್ಟಿರಬೇಕು.

ನಾನು ಕಂಡಂತೆ ಸಿಟಿಯ ಕೆಲವು ನಾಯಿಗಳಂತೂ ಸಂಪೂರ್ಣ ಬದಲಾಗಿವೆ. ನೀವು ಅವುಗಳಿಗೆ ಅನ್ನಸಾರು ಹಾಕಿದರೆ ಮೂಸಿಯೂ ನೋಡುವುದಿಲ್ಲ. 'ನಿನಗೆ ಮಾತ್ರ ಕಣ್ಣಿಗೆ ಕಂಡ ಪಿಜ್ಜಾ, ಬರ್ಗರುಗಳೆಲ್ಲ ಬೇಕು. ನಾವು ಮಾತ್ರ ನೀನು ಹಾಕಿದ ಹಳಸಲು ಫುಡ್ಡು ತಿನ್ನಬೇಕಾ?' ಅನ್ನುವಂತೆ ಮುಖ ಹುಳ್ಳಗಾಗಿಸಿಕೊಳ್ಳುತ್ತವೆ. ಬೇಕರಿಯ ಬ್ರೆಡ್ಡೋ ಬಿಸ್ಕೀಟು ಹಾಕಿದವರಿಗೆ ಮಾತ್ರ ಸ್ವಲ್ಪ ಮರ್ಯಾದೆ. ನಾನ್‌ವೆಜ್ಜು ಐಟಮ್ಮುಗಳಿದ್ದರೆ ಯಾರೋ ಒಳ್ಳೆಯ ಮನುಷ್ಯ ಸಿಕ್ಕಿದ ಅಂತ ಕೊಂಚ ಗೌರವ ತೋರಿಸಿ ಬಾಲ ಅಲ್ಲಾಡಿಸಿ ಲಯಕ್ಕೆ ಮರಳುತ್ತವೆ. ಹಳ್ಳಿಗಳಲ್ಲಿ ಹಾಗಲ್ಲ. ತನ್ನ ಧಣಿ ಹಾಕಿದ ಆಹಾರ ಅದು ವಿಷವೇ ಆಗಿರಲಿ ಬಗ್ಗಿಸಿದ ತಲೆ ಎತ್ತದೆ ತಿನ್ನುತ್ತವೆ. ಇನ್ನು ಹಸುಗೂಸುಗಳು ಹಾಕಿದ ಪಿಸುಕೆಯಂತೂ ಅವುಗಳ ಅಚ್ಚುಮೆಚ್ಚಿನ ನಾಷ್ಟ. ಯಾವುದೇ ಬಿಂಕ ಬಿಗುಮಾನಗಳಿಲ್ಲದೆ ಸಂಪ್ರೀತಿಯಿಂದ ಭುಂಜಿಸುತ್ತವೆ. ಇನ್ನು ಆ ಮಕ್ಕಳನ್ನು ಹೆತ್ತ ಮಹಾಮಾತೆ ಮನೆ ಮುಂದೆಯೇ ಆ ಮಗುವನ್ನು ನಿಲ್ಲಿಸಿಕೊಂಡು ಕೂಸಿನ ಎಳೇಮುಕುಳಿಯಿಂದ ಪಾದದವರೆಗೂ ಹರಿಯಲ್ಪಟ್ಟ ಆ ತಿಳಿಹಳದಿ ದ್ರಾವಣವನ್ನು ಹೇಗಪ್ಪಾ ತೊಳೆಯೋದು ಅನ್ನುತ್ತಿರುವಾಗ, 'ಚಿಂತೆ ಬಿಡು ತಾಯೀ, ನಾವಿದ್ದೇವಲ್ಲಾ...' ಅಂತ ಕಾಂಪಿಟಿಷನ್ನಿನಲ್ಲಿ ನುಗ್ಗಿ ಬಂದು ತಮ್ಮ ರಸನಾಂಗಗಳಿಂದ ಅದನ್ನು ನೊಣೆದು ಸ್ವಚ್ಛ ಮಾಡಿ ಮತ್ತೊಂದು ಸರಣಿ ಸುತ್ತಿಗೆ ಕಾದು ಕೂರುತ್ತವೆ. ತದನಂತರ ಮನೆ ಮುಂದೆ

